ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಗಂಗಾವತಿ.

ಸಾಕ್ಷಿಯನ್ನು ದಿನಾಂಕ- 28-10-2025 ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.

C.C. No.- 1530/2016

CW-14/ PW-9

| | |
|---|---|
| ಸಾಕ್ಷಿದಾರರ ಹೆಸರು- | ನಾಗರಾಜ |
| ತಂದೆ / ಗಂಡನ ಹೆಸರು- | ಗಿರಿಯಪ್ಪ |
| ವಯಸ್ಸು- | 59 ವರ್ಷಗಳು |
| ಉದ್ಯೋಗ- | ಪಿ ಎಸ್ ಐ ಗಂಗಾವತಿ ನಗರ ಠಾಣೆ |
| ವಾಸಸ್ಥಳ- | ಗಂಗಾವತಿ |

ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ-

ನಾನು 2011 ರಿಂದ ಮೇ 2016 ರವರೆಗೆ ನಾನು ಗಂಗಾವತಿ ಗ್ರಾಮೀಣ ಠಾಣೆಯಲ್ಲಿ ಎ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿ:24-05-2016 ರಂದು ಚಾಸಾ- 15 ರವರ ಆದೇಶದ ಮೇರೆಗೆ ಚಾಸಾ -13 ರವರ ಕಡೆಯಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ಸರಕಾರಿ ಆಸ್ಪತ್ರೆಗೆ ಬೇಟಿ ಕೊಟ್ಟು ಆಸ್ಪತ್ರೆಯಲ್ಲಿ ಶವಗಾರದಲ್ಲಿಟ್ಟ ಮೃತ ಜಗದೀಶ ಶವಪಂಚನಾಮೆಯನ್ನು ಪಂಚರಾದ ಚಾಸಾ- 2 ಮತ್ತು 3 ರವರ ಸಮಕ್ಷಮ ಮೃತನ ಹೆಂಡತಿ ಹಾಜರಾತಿಯಲ್ಲಿ ಶವತನಿಖಾ ಪಂಚನಾಮೆಯನ್ನು ಮುಂಜಾನೆ 7-00 ರಿಂದ 800 ರವರಿಗೆ ಜರುಗಿಸಿರುತ್ತೇವೆ. ಸಾಕ್ಷಿಯು ಶವಪಂಚನಾಮೆ ತನಿಖೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ- 4 ಬಿ ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ- 4 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಯನ್ನು ಚಾಸಾ- 15 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಕೆ ವಕೀಲರಿಂದಃ

ಮೃತ ವ್ಯಕ್ತಿ ಗಾಡಿಯಲ್ಲಿ ಬರುವಾಗ ಮೃತಪಟ್ಟಿರುತ್ತಾರೆ ಅಂತಾ ನನ್ನ ತನಿಖೆ ಕಾಲದಲ್ಲಿ ಗೊತ್ತಾಗಿರುತ್ತದೆ. ಯಾರ ತಪ್ಪಿನಿಂದ ಅಪಪಘಾತವು ಆಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.ಚಾಸಾ- 4 ರವರ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಹೋಗಿ ಯಾವುದೇ ಶವ ತನಿಖಾ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಅದನ್ನು ಠಾಣೆಯಲ್ಲಿ ತಯಾರಿಸಿ ಪಂಚರ ಸಹಿ ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಗಂಗಾವತಿ